# ಆಹಾ ಸುದ್ದಿ!

★ ಸಸಿತೋಟ



ಟೋಕಿಯೋದ ಟೈಟೊ ಶೂ ತಯಾರಿಕೆಗೆ ಖ್ಯಾತಿ ಪಡೆದ ನಗರ. ಇತ್ತೀಚೆಗೆ ಗಿನ್ನೆಸ್ ದಾಖಲೆ ಬರೆಯಲು ಕೂತ 800 ಮಂದಿ ತಮ್ಮ ತಮ್ಮ ಶೂಗಳನ್ನು ಪಾಲಿಷ್ ಮಾಡಿಕೊಂಡರು. ಮನೆಯಲ್ಲಿ ತಮ್ಮ ಶೂಗಳ ಜೊತೆ ತಮ್ಮ ಹೆಂಡತಿಯರ ಶೂಗಳನ್ನೂ ಪಾಲಿಷ್ ಮಾಡುವವರನ್ನು ಲೆಕ್ಕಕ್ಕೆ ಹಿಡಿದಿದ್ದರೆ ಇನ್ನೊಂದು ಅಭೂತಪೂರ್ವ ದಾಖಲೆಯಾಗುತ್ತಿತ್ತು.



ಅಮೆರಿಕಾದ ಕನೆಕ್ಟಿಕಟ್‌ನ ದಂಪತಿ ಜಾನ್ (102) ಮತ್ತು ಆ್ಯನ್ (98). 1932ರಲ್ಲಿ ಮದುವೆಯಾದ ಈ ದಂಪತಿ ಇದೇ 25ರಂದು 81ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡರು. ವರ್ಲ್ಡ್‌ವೈಡ್ ಮ್ಯಾರೇಜ್ ಎನ್‌ಕೌಂಟರ್ ದೀರ್ಘಾವಧಿ ಮದುವೆ ಪ್ರಶಸ್ತಿಯನ್ನೂ ಇವರಿಗೆ ನೀಡಿದೆಯಂತೆ. ಅಮೆರಿಕಾದಂತಹ ದೇಶದಲ್ಲಿ ಮದುವೆ ಇಷ್ಟು ಅವಧಿ ಬಾಳಿಕೆ ಬರಲು ಯಾರ ಜುಟ್ಟು ಯಾರ ಕೈಲಿದೆಯೋ ಎಂಬ ಗುಟ್ಟನ್ನು ದಂಪತಿ ಬಿಟ್ಟು ಕೊಟ್ಟಿಲ್ಲವಂತೆ.

ಕೆನಡಾದ 83 ವರ್ಷ ವಯಸ್ಸಿನ ಈ ಜೋಡಿ ಜಾರ್ಜ್ ಮತ್ತು ಕ್ಯಾರೋಲ್ ಮದುವೆಯಾಗಿದ್ದು ಮೊದಲ ಮುತ್ತಿನ ಸವಿಯ 75 ವರ್ಷಗಳ ನಂತರವಂತೆ. ಅಂದರೆ ಮೂರನೇ ತರಗತಿಯಲ್ಲಿದ್ದಾಗ ನಾಟಕದಲ್ಲಿ ಈ ಮುತ್ತಿನ ವಿನಿಮಯವಾಗಿತ್ತಂತೆ. ಅವರವರ ಜೊತೆಗಾರ/ ಜೊತೆಗಾರ್ತಿ ತೀರಿಕೊಂಡ ನಂತರ ಗುಂಡಗಿರುವ ಭೂಮಿ ಮತ್ತೆ ಇಬ್ಬರನ್ನೂ ಎದುರುಬದುರು ನಿಲ್ಲಿಸಿರಬಹುದು.



ಮ್ಯಾಡ್ರಿಡ್‌ನಲ್ಲಿ ಕ್ಯಾಬರೆ ಪ್ರಚಾರ ಮಾಡುವ ಜಾಹೀರಾತಿದು. ಕ್ಯಾಬರೆ ಅಂದರೆ ಅರೆಬರೆ ಎಂಬುದು ಗೊತ್ತಿದ್ದರೂ ಅದ್ಯಾಕೆ ಬರಿಗಾಲು ತೋರಿಸಿದ್ದಾರೋ!

ಆಕೆ 52 ವರ್ಷ ವಯಸ್ಸಿನ ಶರ್ಮೇನ್ ಮೈಲ್ಸ್. ಶಿಕಾಗೋದಲ್ಲಿ 396 ಬಾರಿ ಬಂಧನಕ್ಕೆ ಒಳಗಾಗಿ ಜೈಲಿನ ರುಚಿಯನ್ನು ಪದೇ ಪದೇ ನೋಡಿ ಇತ್ತೀಚೆಗೆ ಬಿಡುಗಡೆಯಾಗಿದ್ದಾಳಂತೆ. 397ನೇ ಸರದಿ ಯಾವಾಗ ಎಂಬ ಪತ್ರಕರ್ತರ ಪ್ರಶ್ನೆಗೆ ಕೈಯಲ್ಲಿರೊ ವಸ್ತುಗಳಿಂದಲೇ ಹೊಡೆಯಲು ಹೋದಳಂತೆ. ಪತ್ರಕರ್ತರ ಪ್ರಶ್ನೆಗೆ ಬಾಯಿಯ ಬದಲು ಕೈಯಲ್ಲೇ ಉತ್ತರ ಸಿಕ್ಕಿರಬಹುದು.



ಗುಜರಾತ್‌ನಲ್ಲಿ ಮದುವೆಯಾಗಿ 50ಕ್ಕಿಂತ ಅಧಿಕ ವರ್ಷಗಳಾದ 24 ಜೋಡಿಗೆ ಮತ್ತೆ ವಿವಾಹ ಸಂಭ್ರಮದ ಯೋಗ. ಅಲ್ಲಿಯ ಹಿರಿಯ ನಾಗರಿಕರ ಮಂಡಳಿ ಇದನ್ನು ಆಯೋಜಿಸಿತ್ತಂತೆ. ಈಗಿನವರಿಗೆ ಈ 50ರ ಅಂಕಿ ಬಹು ದೊಡ್ಡದಾಗಿ ಕಂಡು ಇಂತಹ ಸಂಭ್ರಮಗಳು ನಡೆದಿರಬಹುದು.